ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ

ದಿನಾಂಕ : DATE : 24/02/2020

## ಆಲಸ್ಯದ ಸಚಿವರ ನೆತ್ತಿಯ ಮೇಲೆ ತೂಗುಗತ್ತಿ

# ಜೋಂಪಿನಲ್ಲಿರುವವರಿಗೆ ಜೂನ್ ಡೆಡ್‌ಲೈನ್

24/2/2020

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅತೃಪ್ತಿಯಿಂದ ಕಿಡಿಕಾರುತ್ತಿರುವ ಮೂಲ ಬಿಜೆಪಿ ಸಚಿವಾಕಾಂಕ್ಷಿಗಳಿಗೆ ಹೈಕಮಾಂಡ್ ಸಿಹಿ ಸುದ್ದಿ ನೀಡಿದ್ದು, 'ಈಗಾಗಲೇ ಸಚಿವರಾಗಿ ಮಂಪರಿನಲ್ಲಿರವವರನ್ನು ಜೂನ್ ವೇಳೆಗೆ ಜಾಗ ಖಾಲಿ ಮಾಡಿಸಿ ನೂತನ ಸಚಿವರನ್ನು ಆಯ್ಕೆ ಮಾಡಿ' ಎಂದು ಸೂಚನೆ ನೀಡಿದೆ.

ಯಡಿಯೂರಪ್ಪ ಸಂಪುಟದ ಎರಡನೇ ವಿಸ್ತರಣೆಯಲ್ಲಿ ಪಕ್ಷಾಂತರಿ ಶಾಸಕರನ್ನು ಮಾತ್ರವೇ ಸೇರ್ಪಡೆ ಮಾಡಿಕೊಂಡಿದ್ದು, ಮೂಲ ಬಿಜೆಪಿ ಶಾಸಕರನ್ನು ಕಂಗೆಡಿಸಿತ್ತು. ಪ್ರಬಲ ಆಕಾಂಕ್ಷಿಗಳಾಗಿದ್ದ ಉಮೇಶ್ ಕತ್ತಿ, ಮುರುಗೇಶ್ ನಿರಾಣಿ, ರಾಜೂಗೌಡ, ಅಂಗಾರ ಸೇರಿದಂತೆ ಕೆಲವರು ಹೈಕಮಾಂಡ್‌ಗೆ ಈ ಬಗ್ಗೆ ದೂರನ್ನೂ ನೀಡಿದ್ದರು. ಅಲ್ಲಲ್ಲಿ ಸಭೆಗಳನ್ನು ನಡೆಸಿ ಅತೃಪ್ತಿ ಹೊರಹಾಕಿದ್ದರು. ಇದೆಲ್ಲವನ್ನೂ ಗಮನಿಸಿದ ಹೈಕಮಾಂಡ್, 'ಈಗಾಗಲೇ ಸ್ಥಾನ ನೀಡಿರುವ ಸಚಿವರ ಕಾರ್ಯಚಟುವಟಿಕೆ ಗಮನಿಸಿ ಜೂನ್ ವೇಳೆಗೆ ನೂತನ ಸಚಿವರಿಗೆ ಅವಕಾಶ ಮಾಡಿಕೊಡಿ' ಎಂದು ಸಿಎಂ ಯಡಿಯೂರಪ್ಪ ಅವರಿಗೆ ಸೂಚನೆ ನೀಡಿದೆ.

ಈಗಿರುವ ಸಚಿವರ ಪೈಕಿ ನಾಲ್ಕೈದು ಸಚಿವರನ್ನು ಹೊರತುಪಡಿಸಿದರೆ ಉಳಿದ ಸಚಿವರು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ. ತಮ್ಮ ಖಾತೆಗಳು ಯಾವುದು ಎಂಬ ಬಗ್ಗೆಯೇ ಕೆಲವು ಸಚಿವರಿಗೆ ಮಾಹಿತಿ ಇದ್ದಂತಿಲ್ಲ. ಅದರಲ್ಲೂ ಈಗ ಬದಲಾಗಿ ನೂತನ ಸಚಿವರ ಕೈ ಸೇರಿರುವ ಖಾತೆಗಳಿಂದ ಮತ್ತಷ್ಟು ಗೊಂದಲದಲ್ಲಿದ್ದಾರೆ. ಇಲಾಖೆ ಕೆಲಸಗಳನ್ನು ಸಮರ್ಪಕವಾಗಿ ನಿಭಾಯಿಸದೆ ಕಾಲಹರಣ ಮಾಡುತ್ತಿದ್ದಾರೆ. ಈಗ ಇವರೆಲ್ಲರಿಗೆ ಬಿಸಿ ಮುಟ್ಟಿಸುವುದರ ಜತೆಗೆ ಅತೃಪ್ತರಿಗೆ ಅವಕಾಶ ಮಾಡಿಕೊಡುವ ಕೆಲಸ ಮಾಡಲು ತೀರ್ಮಾನಿಸಲಾಗಿದೆ.

ರಾಜ್ಯ ಸರಕಾರದಲ್ಲಿ ಬೊಮ್ಮಾಯಿ, ಈಶ್ವರಪ್ಪ, ಕಾರಜೋಳ, ಸವದಿ, ಅಶ್ವತ್ಥ ನಾರಾಯಣ, ಅಶೋಕ, ಸುರೇಶ್ ಕುಮಾರ್ ಹೊರತುಪಡಿಸಿ ಉಳಿದ ಸಚಿವರು ಅಷ್ಟೊಂದು ಸಕ್ರೀಯವಾಗಿ ತಮ್ಮ ಇಲಾಖೆ ಕೆಲಸಗಳನ್ನು ಮಾಡುತ್ತಿಲ್ಲ. ಸಿ.ಟಿ.ರವಿ ಅಲ್ಲಲ್ಲಿ ಕೆಲ ಹೇಳಿಕೆ ನೀಡಿ ಗೊಂದಲ ಮೂಡಿಸುತ್ತಿರುವುದು ಹೊರತುಪಡಿಸಿ ಇಲಾಖೆಗೆ ಸಂಬಂಧಿಸಿದ ಸಾಧನೆ ಅಷ್ಟಕ್ಕಷ್ಟೇ. ಜೊಲ್ಲೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿ ಶೂನ್ಯ ಸಾಧನೆ ಮಾಡಿದ್ದಾರೆ. ಆಹಾರ ಸಚಿವೆಯಾಗಿ ಮಠದ ಅಕ್ಕಿ ನಿಲ್ಲಿಸಿ ವಿವಾದ ಸೃಷ್ಟಿಸಿದ್ದರು. ಸೋಮಣ್ಣ ದಸರಾ ನಂತರ ನಾಪತ್ತೆಯಾಗಿದ್ದಾರೆ. ಕೋಟ ಸಾಮೂಹಿಕ ವಿವಾಹದ ಹೊರತು ಬೇರೇನೂ ಮಾತನಾಡುತ್ತಿಲ್ಲ. ಹೀಗಿರುವಾಗ ಮೂಲ ಬಿಜೆಪಿಗರ ಪೈಕಿ ಸಚಿವರ ತಲೆ ದಂಡಕ್ಕೆ ಹೈಕಮಾಂಡ್ ತೀರ್ಮಾನಿಸಿದೆ.



### ಆಂತರಿಕ ಮೌಲ್ಯಮಾಪನ

ಸರಕಾರ ರಚನೆಯಾದ ಸಂದರ್ಭದಲ್ಲಿ ಸಚಿವರಾಗಿ ಅಧಿಕಾರ ಸ್ವೀಕಾರ ಮಾಡಿದ ಸಚಿವರನ್ನು ಆಂತರಿಕ ಮೌಲ್ಯಮಾಪನಕ್ಕೊಳಪಡಿಸಿ ವರದಿ ನೀಡುವಂತೆ ಹೈಕಮಾಂಡ್ ಸೂಚಿಸಿದೆ. ಇದಕ್ಕಾಗಿ ಸಿಎಂ ಯಡಿಯೂರಪ್ಪ ಅವರು ಸರಕಾರದ ಪ್ರತಿನಿಧಿಗಳನ್ನು ಬಳಸಿಕೊಳ್ಳಲು ತೀರ್ಮಾನಿಸಿದ್ದರು. ಆದರೆ, ಪಕ್ಷದ ವತಿಯಿಂದಲೇ ಸಚಿವರ ಮೌಲ್ಯಮಾಪನ ಮಾಡಿ ವರದಿ ನೀಡುವುದಾಗಿ ಪಕ್ಷದ ನಾಯಕರು ತಿಳಿಸಿದ್ದಾರೆ. ಹೀಗಾಗಿ, ಪಕ್ಷನಿಷ್ಠರಿಗೆ ಅವಕಾಶ ಮಾಡಿಕೊಡಬಹುದು, ಜತೆಗೆ ಈಗ ಅತೃಪ್ತಿ ವ್ಯಕ್ತಪಡಿಸಿರುವ ಕೆಲವು ಶಾಸಕರು ಮುಂದಿನ ವಿಸ್ತರಣೆಯಲ್ಲಿ ಅವಕಾಶ ಪಡೆಯಬಹುದು ಎಂಬುದು ಪಕ್ಷದ ಲೆಕ್ಕಾಚಾರವಾಗಿದೆ.

### ಶಿಸ್ತು ಉಲ್ಲಂಘಿಸದಂತೆ ಅತೃಪ್ತರಿಗೆ ಎಚ್ಚರಿಕೆ

ಜೂನ್‌ವರೆಗೆ ಡೆಡ್‌ಲೈನ್ ನೀಡಿರುವ ಹೈಕಮಾಂಡ್, ಜೂನ್ ನಂತರ ಸಕ್ರಿಯವಲ್ಲದ ಸಚಿವರ ಸ್ಥಾನಗಳಿಗೆ ಈಗ ಅತೃಪ್ತಿ ಹೊಂದಿರುವವರ ಪೈಕಿ ಸೂಕ್ತವಾದವರನ್ನು ಆಯ್ಕೆ ಮಾಡುತ್ತೇವೆ. ಆದರೆ, ಅಲ್ಲಿವರೆಗೆ ಪಕ್ಷದ ಅಥವಾ ಸರಕಾರದ ವಿರುದ್ಧ ಹೇಳಿಕೆ ನೀಡುವುದು, ಸಿಎಂ ವಿರುದ್ಧ ಆಕ್ರೋಶ ವ್ಯಕ್ತಪಡಿಸುವುದು, ಪಕ್ಷದ ಇತರೆ ನಾಯಕರ ಮನೆಯಲ್ಲಿ ಸಭೆ ಸೇರುವುದು, ಅತೃಪ್ತರೆಲ್ಲ ಒಟ್ಟಾಗಿ ಸಭೆ ನಡೆಸುವುದು ಸೇರಿ ಇನ್ನಿತರ ವಿಚಾರಗಳಲ್ಲಿ ಪಕ್ಷದ ಶಿಸ್ತನ್ನು ಉಲ್ಲಂಘಿಸಬಾರದು. ಒಂದು ವೇಳೆ ಪಕ್ಷದ ನಿಯಮ ಉಲ್ಲಂಘನೆ ಮಾಡಿ ಇಂತಹ ನಡವಳಿಕೆ ತೋರ್ಪಡಿಸಿದರೆ ಶಿಸ್ತು ಕ್ರಮದ ಜತೆಗೆ ಮುಂದೆ ಅವಕಾಶ ಕಳೆದುಕೊಳ್ಳಬೇಕಾಗಬಹುದು ಎಂಬ ಎಚ್ಚರಿಕೆಯನ್ನೂ ಅತೃಪ್ತರಿಗೆ ಹೈಕಮಾಂಡ್ ನೀಡಿದೆ.